ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ:347/2025

ಪಿ ಡಬ್ಲ್ಯೂ: 3
ಸಿ ಡಬ್ಲ್ಯೂ: 1

| | | |
|---|---|---|
| ಸಾಕ್ಷಿಯ ಹೆಸರು | : | ಶಿವಯ್ಯ |
| ತಂದೆಯ ಹೆಸರು | : | ಗ್ಯಾನಪ್ಪಯ್ಯ |
| ವಯಸ್ಸು | : | 35 |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಉಪ ವಿಭಾಗ ರಾಣೆಬೆನ್ನೂರು |
| ವಾಸಸ್ಥಳ | : | ರಾಣೆಬೆನ್ನೂರು |

ದಿನಾಂಕ: 17.03.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು 14.10.2024 ರಿಂದ ಪಿರ್ಯಾದಿ ಕಛೇರಿಯಲ್ಲಿ ಅಬಕಾರಿ ನಿರೀಕ್ಷರಾಗಿ ಕೆಲಸ ಮಾಡುತ್ತಿದ್ದೇನೆ.

2. ದಿನಾಂಕ 08.01.2025 ರಂದು ಮದ್ಯಾಹ್ಣ 3.45 ಕ್ಕೆ ರಾಣೆಬೆನ್ನೂರಿನ ಹನುಮಾಪುರ ತಾಂಡಾದಲ್ಲಿ ನಾನು ಮತ್ತು ಚಾಸಾ 4 ರವರೊಂದಿಗೆ ಗಸ್ತು ಮಾಡುತ್ತಿದ್ದು, ಸದರಿ ತಾಂಡಾದಲ್ಲಿ ಆರೋಪಿಯು ತನ್ನ ಅಂಗಡಿಯಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು, ನಂತರ ಸದರಿ ಗ್ರಾಮದ ಸೇವಾಲಾಲ ದೇವಸ್ಥಾನದ ಬಳಿ ನಿಂತಿದ್ದ ಗ್ರಾಮಸ್ಥರಿಗೆ ಪಂಚರಾಗಿ ಬರುವಂತೆ ಕೇಳಿದಾಗ ನಿರಾಕರಿಸಿದ್ದು, ನಂತರ ನಮ್ಮ ಜೊತೆ ಗೃಹ ರಕ್ಷಕ ಸಿಬ್ಬಂದಿಗಳಾಗಿದ್ದ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರ ಮಾಡಿಕೊಂಡು ಶೋಧನಾ ಸಮುಚಿತ ವಾರಂಟ್ ನ್ನು ತಯಾರಿಸಿಕೊಂಡು ಸಂಜೆ 4.00 ರ ಸುಮಾರಿಗೆ ಆರೋಪಿಯ ಅಂಗಡಿಗೆ ಹೋಗಿ ನೋಡಲಾಗಿ, ಸದರಿ ಅಂಗಡಿಯ ಕೌಂಟರ್ ಕೆಳಗಡೆ 3 ರಟ್ಟಿನ ಬಾಕ್ಸ ಗಳಲ್ಲಿ ಈ ಕೆಳಕಂಡ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಗುನ್ನಾ ಜಾಗದಿಂದ ವಶಪಡಿಸಿಕೊಳ್ಳಲಾಯಿತು.

1. 90 ಮಿಲಿಯ 92 ಓ.ಸಿ. ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳು
2. 90 ಮಿಲಿಯ 41 ಬಿ ಪಿ ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳು

3. 90 ಮಿಲಿಯ 60 ಹೆಚ್ ಸಿ ವಿಸ್ಕಿ ಟೆಟ್ರಾ ಪ್ಯಾಕೆಟ್

ಸದರಿ ಟೆಟ್ರಾ ಪ್ಯಾಕೆಟ್ ಗಳನ್ನು ಗುನ್ನಾ ಜಾಗದಿಂದ ವಶಪಡಿಸಿಕೊಂಡಿದ್ದು ಟೆಟ್ರಾ ಪ್ಯಾಕೆಟ್ ಗಳಲ್ಲಿ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು. ಆರೋಪಿಯನ್ನು ವಿಚಾರಿಸಿದಾಗ ಯಾವುದೇ ಮದ್ಯ ಮಾರಾಟದ ಪರವಾನಿಗೆಯನ್ನು ಹೊಂದಿರಲಿಲ್ಲ. ಆರೋಪಿಯ ಹೆಸರು ಮಲ್ಲೇಶಪ್ಪ ಉರ್ಪ ಮಲ್ಲಪ್ಪ ತಂದೆ ಶಂಕರಪ್ಪ ಲಮಾಣಿ ಆಗಿರುತ್ತದೆ.

3. ಈ ಮೇಲೆ ವಶಪಡಿಸಿಕೊಂಡ ಮುದ್ದೆ ಮಾಲುಗಳಲ್ಲಿ ತಲಾ 25 ಟೆಟ್ರಾಪ್ಯಾಕೆಟ್ ಗಳನ್ನು ಸ್ಯಾಂಪಲ್ ಗಾಗಿ ಪ್ರತ್ಯೇಕಿಸಿ ಅವುಗಳನ್ನು ಇಲಾಖಾ ಸೀಲ್ ನಂ.661 ಎಂದು ಸೀಲ್ ಮಾಡಿ, ಸಂಜೆ 4.10 ರಿಂದ 4.47 ರ ವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ತಯಾರಿಸಲಾಯಿತು. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ಆರೋಪಿಗೆ ಕಲಂ 41(ಎ) ಅಡಿಯಲ್ಲಿ ನೋಟೀಸನ್ನು ನೀಡಿ ಕಚೇರಿಗೆ ಹಾಜರಾಗಿ ನಾನೇ ಸ್ವತಃ ದೂರನ್ನು ತಯಾರಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

4. ಸಾಕ್ಷಿಯು ನಿಪಿ 1 ರ ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಸಿ ಎಂದು ಗುರುತಿಸಲಾಯಿತು. ದೂರು ಮತ್ತು ಅದರಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 2 ಎಂದು, ಸಹಿಯನ್ನು ನಿಪಿ 2 ಎ ಎಂದು, ಶೋಧನಾ ಸಮುಚಿತ ಆಧಾರ ವರದಿಯನ್ನು ನಿಪಿ 3 ಎಂದು, ಅದರಲ್ಲಿನ ಸಹಿಯನ್ನು ನಿಪಿ 3 ಎ ಎಂದು, ಜಪ್ತಿ ಸ್ವತ್ತುಗಳ ಪಟ್ಟಿಯನ್ನು ನಿಪಿ 4 ಎಂದು, 2 ಫೋಟೋ ಮತ್ತು ಸಿಡಿಯನ್ನು ನಿಪಿ- 5 ರಿಂದ 7 ಮತ್ತು ಪ್ರಥಮ ವರ್ತಮಾನ ವರದಿಯನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು 8 ಎ ಎಂದು ಗುರುತಿಸಲಾಯಿತು. ಕಲಂ 65 ಬಿ ಪ್ರಮಾಣ ಪತ್ರವನ್ನು ನಿಪಿ-9 ಎಂದು ಮತ್ತು ಸಾಕ್ಷಿಯ ಸಹಿಯನ್ನು 9 ಎ ಎಂದು ಗುರುತಿಸಲಾಯಿತು.

5.ಸಾಕ್ಷಿಯು ಮುದ್ದೇ ಮಾಲು ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ದಾಳಿಯ ದಿನದಂದು ಹೊನ್ನತ್ತಿ ಮಾರ್ಗದ ಮೂಲಕ ಹನಮಾರು ಗ್ರಾಮದಲ್ಲಿ ಗಸ್ತು ಮಾಡಿರುತ್ತೇವೆ. ಆರೋಪಿ ಮದ್ಯ ಮಾರಾಟ ಮಾಡುತ್ತಿದ್ದನು ಎಂಬ ಕುರಿತು ನಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ನಿಪಿ-5 ಮತ್ತು 6 ರಲ್ಲಿ ಕಾಣಿಸುವ ಗುನ್ನಾ ಜಾಗವು ಆರೋಪಿಗೆ ಸೇರಿರುವುದಿಲ್ಲ ಎಂದರೆ ಸಾಕ್ಷಿಯು ಭಾತ್ಮಿ ಆರೋಪಿಯು ಅಂಗಡಿ ಎಂದು ಬಂದಿದೆ ಎಂದು ನುಡಿಯುತ್ತಾರೆ. ದಾಳಿ ಸಮಯದಲ್ಲಿ ಸುಮಾರು 10-15 ಜನ ಗ್ರಾಮಸ್ಥರು

ಸೇರಿದ್ದರು. ಸ್ಥಳಿಯರು ಪಂಚನಾಮೆಗೆ ನಿರಾಕರಿಸಿರುವ ಕಾರಣ ಪಂಚರಾಗಿರುವುದಿಲ್ಲ.

2. ರಟ್ಟಿನ ಬಾಕ್ಸಿನಲ್ಲಿ ಮಧ್ಯ ಇರುವ ಕುರಿತು ಪೋಟೋ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋಗಳು ನಮ್ಮ ಕಛೇರಿಯಲ್ಲಿಯೇ ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ದಾಳಿಯ ಕಾಲಕ್ಕೆ ಗುನ್ನಾ ಜಾಗದಲ್ಲಿ ಯಾವುದೇ ಮಧ್ಯ ಮತ್ತು ಬಾಕ್ಸಗಳು ಇರಲಿಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಪಂಚರನ್ನು ನಾವೇ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಿಪಿ–1 ರಂತೆ ಮುದ್ದೇ ಮಾಲುಗಳನ್ನು ಜಪ್ತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮುದ್ದೆ ಮಾಲುಗಳಿಗೂ ಮತ್ತು ಆರೋಪಿಗು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ಪ್ರಕರಣ ದಾಖಲಿಸುವ ಉದ್ದೇಶ ಇದ್ದ ಕಾರಣ ಸ್ಥಳಿಯರು ಪಂಚರಾಗಿ ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/–

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.